# ಬೈಬಲ್ ರಸಪ್ರಶ್ನೆ
# ರೋಮನ್ನರು, 1&2 ಕೊರಿಂಥಿಯರು, ಗಲಾತ್ಯರು

1. ಪೌಲನು ನೇಮಕಗೊಂಡದ್ದು ಇದಕ್ಕಾಗಿ:

   **ಅ. ದೇವರ ಶುಭಸಂದೇಶವನ್ನು ಸಾರಲು**

   ಆ. ದೀಕ್ಷಾಸ್ನಾನ ನೀಡಲು

   ಇ. ಕೌನ್ಸಿಲ್ ಸಭೆಗಳನ್ನು ನಡೆಸಲು

   ಈ. ಮೇಲಿನ ಯಾವುದೂ ಇಲ್ಲ

2. ಪೌಲನು ನೋವಿನಿಂದ ಬರೆದ ಪತ್ರ ಯಾವುದು?

   ಅ. ರೋಮನ್ನರಿಗೆ ಬರೆದ ಪತ್ರ

   ಆ. 1 ಕೊರಿಂಥಿಯರಿಗೆ ಬರೆದ ಪತ್ರ

   **ಇ. 2. ಕೊರಿಂಥಿಯರಿಗೆ ಬರೆದ ಪತ್ರ**

   ಈ. ಗಲಾತ್ಯದವರಿಗೆ ಬರೆದ ಪತ್ರ

3. "ಯಾರು ದೇವರೊಡನೆ ಸತ್ಸಂಬಂಧ ಹೊಂದಿರುತ್ತಾರೋ ಅವರು........."

   ಅ. ಕಷ್ಟಪಟ್ಟು ಕೆಲಸ ಮಾಡುತ್ತಾರೆ

   ಆ. ತಮ್ಮನ್ನೇ ದೇವರಿಗೆ ಸಮರ್ಪಿಸಿಕೊಳ್ಳುತ್ತಾರೆ

   **ಇ. ವಿಶ್ವಾಸದಿಂದಲೇ ಸಜ್ಜೀವವನ್ನು ಪಡೆಯುತ್ತಾರೆ**

   ಈ. ವೇದ ಪ್ರಚಾರಕರಾಗುತ್ತಾರೆ

4. ತಪ್ಪಿತಸ್ಥನನ್ನು ಕ್ಷಮಿಸುವಂತೆ ಪೌಲನು ಕೊರಿಂಥಿಯ ಸಮುದಾಯವನ್ನು ಕೇಳಲು ಕಾರಣ:

   **ಅ. ಅವನು ಅತೀವ ದು:ಖದಲ್ಲಿಯೇ ಮುಳುಗಿಹೋಗಬಾರದೆಂದು**

   ಆ. ಅವನು ಮತ್ತೆ ತನ್ನ ಕುಟುಂಬ ಸದಸ್ಯರೊಂದಿಗೆ ಸೇರಿಕೊಳ್ಳಲೆಂದು

   ಇ. ಅವನು ಪೌಲನ ನಾಯಕತ್ವವನ್ನು ಒಪ್ಪಿಕೊಳ್ಳಲೆಂದು

   ಈ. ಅವನು ಪಾಪದ ಶಕ್ತಿಯನ್ನು ಅರ್ಥಮಾಡಿಕೊಳ್ಳಲೆಂದು

5. ಪೌಲನು ಯಾರ ಮುಖಾಂತರ ಪ್ರೇಷಿತನಾಗುವ ಸೌಭಾಗ್ಯ ಪಡೆದನು?

   ಅ. ಬಾರ್ನಬ

ಆ. ತಂದೆ ದೇವರು

ಇ. ಪೇತ್ರ

**ಈ. ಯೇಸುಕ್ರಿಸ್ತ**

6. "ದೇವರಾತ್ಮ ಎಲ್ಲಿದೆಯೋ ಅಲ್ಲಿದೆ......

ಅ. ನಿಧಿ

ಆ. ತಂದೆ ದೇವರು

**ಇ. ಸ್ವಾತಂತ್ರ್ಯ**

ಈ. ಮೇಲಿನ ಎಲ್ಲವೂ

7. ದೇವರೊಡನೆ ಸತ್ಸಂಬಂಧವನ್ನು ಪಡೆಯುವವರು ಯಾರು?

ಅ. ಧರ್ಮಶಾಸ್ತ್ರವನ್ನು ಆಲಿಸುವವರು

**ಆ. ಧರ್ಮಶಾಸ್ತ್ರವನ್ನು ಪಾಲಿಸುವರು**

ಇ. ಧರ್ಮಶಾಸ್ತ್ರವನ್ನು ಬರೆಯುವವರು

ಈ. ಮೇಲಿನ ಯಾವುದೂ ಅಲ್ಲ

8. ಪೌಲನು ಯಾರನ್ನು ನಿಜವಾದ 'ಯೆಹೂದ್ಯ' ಎಂದು ಕರೆಯುತ್ತಾನೆ?

ಅ. **ಅಂತರ್ಯದಲ್ಲಿ ಸುನ್ನತಿ ಮಾಡಿಕೊಂಡವವನನ್ನು**

ಆ. ಧರ್ಮಶಾಸ್ತ್ರವನ್ನು ಕಲಿಯುವವನನ್ನು

ಇ. ಧರ್ಮಶಾಸ್ತ್ರವನ್ನು ಕಾಪಾಡುವವನನ್ನು

ಈ. ಬಾಹ್ಯಲಕ್ಷಣವುಳ್ಳ ಶಾರೀರಿಕ ಸುನ್ನತಿ ಮಾಡಿಕೊಂಡವವನನ್ನು

9. ಪೌಲನು ಗಲಾತ್ಯದವರನ್ನು "ಮತಿಗೆಟ್ಟವರು" ಎಂದು ಕರೆಯಲು ಕಾರಣ:

ಅ. ಇತರ ಸಮುದಾಯದವರು ಗಲಾತ್ಯದವರಿಗಿಂತ ಬುದ್ದಿವಂತರಾಗಿರುವುದರಿಂದ

ಆ. ವಿಶ್ವಾಸಿಗಳಾದ ಮೇಲೆ ಅವರು ಧರ್ಮಶಾಸ್ತ್ರವನ್ನು ಅನುಸರಿಸುತ್ತಿರಲಿಲ್ಲ

**ಇ. ಅಧ್ಯಾತ್ಮಿಕ ಜೀವನವನ್ನು ಪ್ರಾರಂಭಿಸಿಯೂ ಈಗ ಅದನ್ನು ಕೇವಲ ದೇಹ ಸಂಬಂಧವಾದ ವಿಧಿಯಿಂದ ಪೂರೈಸಬೇಕೆಂದಿರುವುದರಿಂದ**

ಈ. ಪೌಲನು ಆಜ್ಞಾಪಿಸಿದ್ದನ್ನು ಅವರು ಮಾಡದಿರುವುದರಿಂದ

10. ರೋಮನ್ನರಿಗೆ ಪತ್ರ ಬರೆಯಲು ಪೌಲನಿಗೆ ಸಹಾಯ ಮಾಡಿದ ವ್ಯಕ್ತಿ ಯಾರು?

ಅ. ತಿಮೋಥಿ

ಆ. ತೀತ

**ಇ. ತೆರ್ತ್ಯ**

ಈ. ಫೊಯಿಬೆ

11. ವಾಕ್ಯವನ್ನು ಪೂರ್ಣಗೊಳಿಸಿ: " ಕ್ರಿಸ್ತ ಯೇಸುವಿನೊಂದಿಗೆ ನಾವು ಮರಣ ಹೊಂದಿದ್ದರೆ......"

    ಅ. ನಾವೂ ಅವರಂತೆ ಕಾಣಿಸಿಕೊಳ್ಳುತ್ತೇವೆ

    ಆ. ನಾವೂ ಅವರಂತೆ ಪವಾಡಗಳನ್ನು ಮಾಡುತ್ತೇವೆ

    ಇ. ನಾವೂ ಸ್ವರ್ಗಾರೋಹಣವಾಗುತ್ತೇವೆ

    **ಈ. ನಾವೂ ಅವರೊಡನೆ ಜೀವಿಸುತ್ತೇವೆ.**

12. "ನಾವು ನೋಡಿ ನಡೆಯುವವರಲ್ಲ.........

    ಅ. ಜ್ಞಾನದಿಂದ ನಡೆಯುವವರು

    ಆ. ಪ್ರೀತಿಯಿಂದ ನಡೆಯುವವರು

    **ಇ. ನಂಬಿ ನಡೆಯುವವರು**

    ಈ. ದಾರಿಯಲ್ಲಿ ನಡೆಯುವವರು

13. "ನೀವೂ ಸಹ ಪಾಪದ ಪಾಲಿಗೆ ಸತ್ತವರೆಂದೂ ದೇವರಿಗಾಗಿ ಮಾತ್ರ ಜೀವಿಸುವವರೆಂದೂ ಪರಿಗಣಿಸಿರಿ." ಇದನ್ನು ಹೇಳಿದವರು ಯಾರು?

    ಅ. ಪೇತ್ರ

    **ಆ. ಪೌಲ**

    ಇ. ಯೇಸುಕ್ರಿಸ್ತ

    ಈ. ತಂದೆ ದೇವರು

14. "ನಾವು ಕ್ರಿಸ್ತಯೇಸುವಿನ ರಾಯಭಾರಿಗಳು, ಏಕೆಂದರೆ........."

    **ಅ. ದೇವರೇ ನಮ್ಮ ಮುಖಾಂತರ ಕರೆನೀಡುತ್ತಿದ್ದಾರೆ**

    ಆ. ನಾವು ಕ್ರಿಸ್ತನ ಸಾಕ್ಷಿಗಳು

    ಇ. ನಮ್ಮನ್ನು ರಕ್ಷಿಸಲು ದೇವರು ಯೇಸುವನ್ನು ಕಳುಹಿಸಿದ್ದಾರೆ

    ಈ. ನಮ್ಮನ್ನು ಕ್ರಿಸ್ತನ ಪ್ರೇಷಿತರು ಎಂದು ಕರೆಯಲಾಗುತ್ತದೆ.

15. ಪಾಪದ ವೇತನ .......

**ಅ. ಮರಣ**

ಆ. ಗೆಹೆನ್ನಾ

ಇ. ಜೀವ

ಈ. ಬಹುಮಾನ

16. ಪತಿ ಜೀವಂತವಾಗಿರುವಾಗ, ಇನ್ನೊಬ್ಬ ಪುರುಷನ ಜೊತೆ ವಾಸಿಸುವ ಮಹಿಳೆಯನ್ನು ಏನೆಂದು ಕರೆಯುತ್ತೇವೆ?

ಅ. ಕನ್ಯೆ

ಆ. ವಿಧವೆ

**ಇ. ವ್ಯಭಿಚಾರಿಣಿ**

ಈ. ಹೆಂಡತಿ

17. "ನಗು ನಗುತ್ತಾ ನೀಡುವಾತನನ್ನು ದೇವರು ಪ್ರೀತಿಸುತ್ತಾರೆ" ಈ ಹೇಳಿಕೆಯನ್ನು ಇಲ್ಲಿ ಕಾಣಬಹುದು:

ಅ. ರೋಮನ್ನರು 10:12

ಆ. 1ಕೊರಿಂಥಿಯರು 11:16

**ಇ. 2 ಕೊರಿಂಥಿಯರು 9:7**

ಈ. ಗಲಾತ್ಯರು 2:4

18. ಭೋಧಕರನ್ನು ಹೊಗಳಲು ಪೌಲನು ಈ ವಾಕ್ಯವನ್ನು ಉಲ್ಲೇಖಿಸುತ್ತಾನೆ:

ಅ. "ಪ್ರಭುವಿನ ನಾಮಸ್ಮರಣೆ ಮಾಡುವ ಪ್ರತಿಯೊಬ್ಬನೂ ಜೀವೋದ್ದಾರ ಹೊಂದುತ್ತಾರೆ"

**ಆ. "ಶುಭಸಂದೇಶವನ್ನು ತರುವವರ ಬರುವಿಕೆ ಎಷ್ಟೋ ಶುಭದಾಯಕ"**

ಇ. "ನಾನು ಕ್ರಿಸ್ತಯೇಸುವನ್ನು ಅನುಸರಿಸುವಂತೆ, ನೀವೂ ನನ್ನನ್ನೂ ಅನುಸರಿಸಿರಿ"

ಈ. "ಅವರಲ್ಲಿ ವಿಶ್ವಾಸ ಇಡುವ ಯಾರಿಗೂ ಆಶಾಭಂಗವಾಗುವುದಿಲ್ಲ"

19. ಪೌಲನು ಈ ಮನೆತನಕ್ಕೆ ಸೇರಿದವನು

**ಅ. ಬೆನ್ಯಾಮೀನ್**

ಆ. ಯೂದ

ಇ. ಮನಸ್ಸೆ

ಈ. ಎಫ್ರಾಯಿಮ್

20. "ಹೆಚ್ಚಳಪಡುವವನು ಪ್ರಭುವಿನಲ್ಲೇ ಹೆಚ್ಚಳಪಡಲಿ" ಇದನ್ನು ಹೇಳಿದವರು:

ಅ. ಯೇಸುಕ್ರಿಸ್ತ

ಆ. ದೇವರು

ಇ. ಮೋಶೆ

**ಈ. ಪವಿತ್ರಗ್ರಂಥ**

21. " ನಿಮ್ಮನ್ನು ಹಿಂಸಿಸುವವರನ್ನು ಆಶೀರ್ವದಿಸಿರಿ...ಸಂತೋಷಪಡುವವರೊಂದಿಗೆ ಸಂತೋಷಪಡಿರಿ. ದು:ಖಿಸುವವರೊಡನೆ ದು:ಖಿಸಿರಿ." ಇದನ್ನು ಯಾರು ಯಾರಿಗೆ ಹೇಳಿದರು?

ಅ. ಯೇಸು ಜನಸಮೂಹಕ್ಕೆ

ಆ. ದೇವರು ಇಸ್ರಾಯೇಲರಿಗೆ

**ಇ. ಪೌಲನು ರೋಮನ್ನರಿಗೆ**

ಈ. ಪೌಲನು ಕೊರಿಂಥಿಯರಿಗೆ

22. "ನಾವು ಬದುಕಿದರೂ ಸತ್ತರೂ ಪ್ರಭುವಿಗೆ ಸೇರಿದವರು" ಈ ವಾಕ್ಯವನ್ನು ಯಾವ ಪತ್ರದಲ್ಲಿ ಕಾಣುತ್ತೇವೆ?

ಅ. 1 ಕೊರಿಂಥಿಯರು

ಆ. ಗಲಾತ್ಯರು

ಇ. 2 ಕೊರಿಂಥಿಯರು

**ಈ. ರೋಮನ್ನರು**

23. "ನನ್ನ ಅನುಗ್ರಹವೇ ನಿನಗೆ ಸಾಕು"- ಇದನ್ನು ಯಾರು ಯಾರಿಗೆ ಹೇಳಿದರು?

ಅ. ಪೌಲನು ಗಲಾತ್ಯದವರಿಗೆ

**ಆ. ಯೇಸುಕ್ರಿಸ್ತ ಪೌಲನಿಗೆ**

ಇ. ದೇವರು ಮೋಶೆಗೆ

ಈ. ಪೌಲನು ಕೊರಿಂಥಿಯರಿಗೆ

24. ಕೊರಿಂಥಿಯರ ಸಮುದಾಯದಲ್ಲಿನ 4 ಬಣಗಳು ಯಾವುವು?

**ಅ. ಪೌಲ, ಅಪೋಲಸ, ಕೇಫ ಮತ್ತು ಕ್ರಿಸ್ತ**

ಆ. ಪೌಲ, ಅಪೋಲಸ, ತಿಮೋಥಿ ಮತ್ತು ತೀತ

ಇ. ಪೌಲ, ಪೇತ್ರ, ಅಪೋಲಸ ಮತ್ತು ತಿಮೋಥಿ

ಈ. ಮೇಲಿನ ಯಾವುದೂ ಇಲ್ಲ

25. ಕೊರಿಂಥದಲ್ಲಿ ಪೌಲನಿಂದ ದೀಕ್ಷಾಸ್ನಾನ ಪಡೆದವರು ಯಾರು?

ಅ. ಸೀಲ, ತಿಮೋಥಿ, ತೀತ, ಅಪೋಲಸ

**ಆ. ಕ್ರಿಸ್ಪನು, ಗಾಯನು ಮತ್ತು ಸ್ತೇಫನನ ಮನೆಯವರು**

ಇ. ಅಪೋಲಸ ಮತ್ತು ಅವನ ಮನೆಯವರು

ಈ. ಮೇಲಿನ ಯಾವುದೂ ಅಲ್ಲ

26. ಈ ವಾಕ್ಯಗಳನ್ನು ಪೂರ್ಣಗೊಳಿಸಿ: " ನಾನು ಬಲಶಾಲಿಯಾಗಿರುವುದು......"

ಅ. ದೇವರಲ್ಲಿ ಮನವಿ ಮಾಡಿದಾಗ ಮಾತ್ರ

**ಆ. ಬಲಹೀನನಾಗಿರುವಾಗಲೇ**

ಇ. ನಿರ್ಭಯನಾಗಿರುವಾಗಲೇ

ಈ. ಸಹಾಯವನ್ನು ಯಾಚಿಸಿದಾಗ ಮಾತ್ರ

27. 1ಕೊರಿಂಥಿಯರ ಪತ್ರದಲ್ಲಿ ಪೌಲನು ಉಲ್ಲೇಖಿಸಿರುವ ನಿರ್ದಿಷ್ಟ ಲೈಂಗಿಕ ಅನೈತಿಕತೆ ಯಾವುದು?

ಅ. ಸಲಿಂಗಕಾಮ

ಆ. ವೈವಾಹಿಕಪೂರ್ವ ಲೈಂಗಿಕತೆ

ಇ. ವೇಶ್ಯೆ ಮಕ್ಕಳನ್ನು ಹೇರುವುದು

**ಈ. ಒಬ್ಬನು ತನ್ನ ತಂದೆಯ ಪತ್ನಿಯನ್ನೇ ಇಟ್ಟುಕೊಂಡಿರುವುದು**

28. ಪೌಲನು, ತಾನು ಧರ್ಮಸಭೆಯನ್ನು ಕ್ರೂರವಾಗಿ ಹಿಂಸಿಸಿದ ಬಗ್ಗೆ ಯಾವ ಪತ್ರದಲ್ಲಿ ತಿಳಿಸುತ್ತಾನೆ?

ಅ. ರೋಮನ್ನರು

ಆ. 1 ಕೊರಿಂಥಿಯರು

ಇ. 2ಕೊರಿಂಥಿಯರು

**ಈ. ಗಲಾತ್ಯರು**

29. "ಪವಿತ್ರಾತ್ಮರಿಗೆ ನಿಮ್ಮ ದೇಹ ಗರ್ಭಗುಡಿಯಾಗಿದೆ" ಎಂದು ಯಾವ ಪತ್ರದಲ್ಲಿ ಪೌಲನು ತಿಳಿಸುತ್ತಾನೆ?

ಅ. ರೋಮನ್ನರು

**ಆ. 1 ಕೊರಿಂಥಿಯರು**

ಇ. 2 ಕೊರಿಂಥಿಯರು

ಈ. ಗಲಾತ್ಯರು

30. ಪವಿತ್ರಾತ್ಮದತ್ತವಾದ ಸತ್ಫಲಗಳನ್ನು ಈ ಪತ್ರದಲ್ಲಿ ಉಲ್ಲೇಖಿಸಲಾಗಿದೆ:

ಅ. ರೋಮನ್ನರು

ಆ. 1 ಕೊರಿಂಥಿಯರು

ಇ. 2 ಕೊರಿಂಥಿಯರು

**ಈ. ಗಲಾತ್ಯರು**

31. ನ್ಯಾಯತೀರ್ಪಿನ ಬಗ್ಗೆ ಪೌಲನು ಕೊರಿಂಥಿದವರಿಗೆ ಹೀಗೆ ತಿಳಿಹೇಳಿತ್ತಾನೆ:

ಅ.  ವಿಶ್ವಾಸಿಗಳು ನ್ಯಾಯಾಲಯಕ್ಕೆ ಹೋಗಿ ನ್ಯಾಯ ಪಡೆಯಬೇಕು

ಆ.  ವಿಶ್ವಾಸಿಗಳು ಯಾಜಕನನ್ನು ಸಂಪರ್ಕಿಸಬೇಕು

ಇ.  ವಿಶ್ವಾಸಿಗಳು ನ್ಯಾಯಸಭೆಯನ್ನು ಸಂಪರ್ಕಿಸಬೇಕು

**ಈ. ಸಹೋದರನು ಸಹೋದರನ ವಿರುದ್ಧ ನ್ಯಾಯಾಲಯಕ್ಕೆ ಹೋಗಬಾರದು.**

32. ಇವರಿಗೆ ಸುವಾರ್ತೆಯನ್ನು ಭೋಧಿಸಲು ಪೌಲನನ್ನು ನೇಮಿಸಲಾಯಿತ್ತು:

ಅ. ಸುನ್ನತಿಯವರಿಗೆ/ ಯೆಹೂದಿಗಳಿಗೆ

**ಆ. ಸುನ್ನತಿ ಮಾಡಿಕೊಳ್ಳದವರಿಗೆ/ ಅನ್ಯ ಜನರಿಗೆ**

ಇ. ಬಡವರು ಹಾಗು ನಿರ್ಗತಿಕರಿಗೆ

ಈ.  ಮೇಲಿನ ಯಾವುದೂ ಅಲ್ಲ

33. " ಜ್ಞಾನವು ನಮ್ಮನ್ನು ಅಹಂಕಾರಿಗಳನ್ನಾಗಿ ಮಾಡುತ್ತದೆ. ಪ್ರೀತಿಯಾದರೋ ಭಕ್ತಿಯನ್ನು ವೃದ್ಧಿಗೊಳಿಸುತ್ತದೆ" ಎಂದು ಪೌಲನು ಈ ವಿಚಾರವಾಗಿ ಹೇಳುತ್ತಾನೆ:

**ಅ. ವಿಗ್ರಹಗಳಿಗೆ ನೈವೇದ್ಯ ಅರ್ಪಣೆ**

ಆ. ಪ್ರಭುವಿನ ಭೋಜನ

ಇ. ಸ್ತ್ರೀಯು ತಲೆಯ ಮೇಲೆ ಮುಸುಕು ಹಾಕುವುದು

ಈ.  ಮೇಲಿನ ಯಾವುದೂ ಅಲ್ಲ

34. ಪರವಶಭಾಷೆ ಹಾಗು ಪ್ರಬೋಧನೆಯ ನಡುವೆ ಪೌಲನ ಆದ್ಯತೆ ಇರುವುದು:

ಅ. ಪರವಶಾ ಭಾಷೆ

**ಆ. ಪ್ರಬೋಧನೆ**

ಇ. ಈ ಮೇಲಿನ ಎರಡಕ್ಕೂ

ಈ. ಪವಿತ್ರಾತ್ಮರ ಸತ್ಫಲಗಳ ಮೇಲೆ

35. ಪೌಲನು ಕೇಫನನ್ನು ಖಂಡಿಸಿದ್ದು ಈ ಕಾರಣಕ್ಕಾಗಿ:

ಅ. ಯೆಹೂದಿಗಳನ್ನು ಬೆಂಬಲಿಸುವ ತೀರ್ಪಿನಲ್ಲಿ ಪಕ್ಷಪಾತ

**ಆ. ಅವನ ನಡತೆ ಶುಭಸಂದೇಶದ ಸತ್ಯಕ್ಕೆ ಅನುಗುಣವಾಗಿರಲಿಲ್ಲ**

ಇ. ಶುಭಸಂದೇಶವನ್ನು ಸಾರದೆ ಸಮಯವನ್ನು ವ್ಯರ್ಥಮಾಡಿದ್ದಕ್ಕೆ

ಈ. ಮೇಲಿನ ಯಾವುದೂ ಅಲ್ಲ

36. ಸತ್ತವರ ಪುನರುತ್ಥಾನದ ಬಗ್ಗೆ ವಿವರಿಸುತ್ತಾ ಪೌಲನು ಹೀಗೆ ಹೇಳುತ್ತಾನೆ:

**ಅ. ಬಿತ್ತಿದ್ದು ಭೌತಿಕ ದೇಹ; ಪುನರುತ್ಥಾನಹೊಂದುವಂಥದ್ದು ಆಧ್ಯಾತ್ಮಿಕ ದೇಹ**

ಆ. ಬಿತ್ತಿದ್ದು ಭೌತಿಕ ದೇಹ; ಆದರೆ ಪುನರುತ್ಥಾನಹೊಂದುವಂಥದ್ದು ಪ್ರಾಣಿಗಳ ದೇಹ

ಇ. ಸಾವು ನಮ್ಮೆಲ್ಲರ ಅಸ್ತಿತ್ವದ ಅಂತ್ಯ

ಈ. ಪ್ರಭುವಿನ ಪುನರಾಗಮನದ ಮೊದಲು ಸತ್ತವರನ್ನು ಎಬ್ಬಿಸಲಾಗುತ್ತದೆ

37. ಈ ಇಬ್ಬರು ಸ್ತ್ರೀಯರು ಎರಡು ಒಡಂಬಡಿಕೆಗಳಿಗೆ ಸದೃಶರಾಗಿದ್ದಾರೆ:

ಅ. ರಾಹೇಲ್ ಮತ್ತು ಲೇಯ

ಆ. ಏವಾ ಮತ್ತು ರೆಬೆಕಾ

**ಇ. ಸಾರ ಮತ್ತು ಹಾಗರ**

ಈ. ನವೋಮಿ ಮತ್ತು ರೂತಳು

38. ಪ್ರಭುವಿನ ಭೋಜನದ ಬಗ್ಗೆ ಈ ಪತ್ರದಲ್ಲಿ ಉಲ್ಲೇಖವಿದೆ:

ಅ. ರೋಮನ್ನರು

**ಆ. 1 ಕೊರಿಂಥಿಯರು**

ಇ. 2ಕೊರಿಂಥಿಯರು

ಈ. ಗಲಾತ್ಯರು

39. ಮಹಿಳೆಯು ತಲೆಯ ಮೇಲೆ ಮುಸುಕು ಧರಿಸುವ ಬಗ್ಗೆ ಪೌಲನು ಹೀಗೆನ್ನುತ್ತಾನೆ:

ಅ. ಕಾಮತಾಪದಿಂದ ಬೆಂದುಹೋಗುವುದಕ್ಕಿಂತ ಮುಸುಕು ಹಾಕುವುದು ಒಳ್ಳೆಯದು

ಆ. ಇದರಿಂದ ದೇವರ ಮಹಿಮೆಯನ್ನು ಬಚ್ಚಿಡಲಾಗುತ್ತದೆ.

ಇ. ತಮ್ಮ ಗಂಡಂದಿರಿಗೆ ವಿಧೇಯತೆ ತೋರುವುದು ಒಳ್ಳೆಯದು

**ಈ. ಇಂಥ ಪದ್ಧತಿ ನಮ್ಮಲ್ಲಿ ಇಲ್ಲ; ಇನ್ನಾವ ಧರ್ಮಸಭೆಗಳಲ್ಲೂ ಇಲ್ಲ**

40. ಗಲಾತ್ಯದವರಿಗೆ ಬರೆದ ಪತ್ರದ ಪ್ರಕಾರ, ದೇವರು ಪ್ರೇಷಿತನನ್ನಾಗಿ ಪೌಲನನ್ನು ಆರಿಸಿಕೊಂಡ ಒಡನೆಯೇ ಪೌಲನು ಹೋದ ಸ್ಥಳ:

ಅ. ಜೆರುಸಲೇಮ್

**ಆ. ಅರೇಬಿಯಾ**

ಇ. ತಾರ್ಸ

ಈ. ದೇವಾಲಯ